KARN010007342024

| | | |
|---|---|---|
| Presented on | : | 10-10-2025 |
| Registered on | : | 10-10-2025 |
| Decided on | : | 01-12-2025 |
| Duration | : | 1 month 22 days |

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.

**:ಉಪಸ್ಥಿತರು:**

M H ANNAYYANAVAR
Digitally signed by M H ANNAYYANAVAR
Date: 2025.12.01 17:29:30 +0530

_ಶ್ರೀಯುತ ಎಂ.ಹೆಚ್. ಅಣ್ಣಯ್ಯನವರ, ಬಿಕಾಂ.ಎಲ್.ಎಲ್.ಬಿ. (ವಿಶೇಷ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

## ದಿನಾಂಕ 1 ನೇ ಡಿಸೆಂಬರ್ ಮಾಹೆ 2025

## ಸತ್ರ ಮೊಕದ್ದಮೆ ಸಂಖ್ಯೆ 34/2024

**ಪಿರ್ಯಾದುದಾರರು:** ಸರ್ಕಾರದ ಪರವಾಗಿ ಚನ್ನಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆ,
ಚನ್ನಪಟ್ಟಣ.
(ಪರವಾಗಿ ಸರ್ಕಾರಿ ಅಭಿಯೋಜಕರು)

- ವಿರುದ್ಧ -

**1 ನೇ ಆರೋಪಿ:** ಮುರುಗೇಶ.ಪಿ.,
ಬಿನ್ ಪೆರುಮಾಳ್,
ವಯಸ್ಸು 42 ವರ್ಷ.
ವಾಸಃ ನಂ.14, ಮಾರಿಯಮ್ಮನ್ ಕೋವಿಲ್ ಸ್ಟ್ರೀಟ್,
ಕೃಷ್ಣಾಪುರಂ, ಪೆನ್ನಾಗರಮ್ ತಾಲ್ಲೂಕು,
ಧರ್ಮಪುರಿ ಜಿಲ್ಲೆ, ತಮಿಳುನಾಡು.
(ಪರವಾಗಿ ಶ್ರೀ ವಿಜಯಕುಮಾರ ಕೆ., ವಕೀಲರು)

*****

## ಭಾರತೀಯ ದಂಡ ಸಂಹಿತೆ ಕಲಂ 439 ರಡಿ ಜಾಮೀನು ಅರ್ಜಿಯ ಮೇಲೆ ಆದೇಶ

1 ನೇ ಆರೋಪಿ ಪರ ವಕೀಲರು ಮಾನ್ಯ ನ್ಯಾಯಾಲಯದಲ್ಲಿ ಭಾರತೀಯ ದಂಡ ಸಂಹಿತೆ ಕಲಂ 439 ರ ಅಡಿಯಲ್ಲಿ ಜಾಮೀನು ಅರ್ಜಿಯನ್ನು ಸಲ್ಲಿಸಿ, ಚನ್ನಪಟ್ಟಣ ಗ್ರಾಮಾಂತರ ಪೋಲೀಸ್ ಠಾಣಾಧಿಕಾರಿಯವರು ಅರ್ಜಿದಾರ ಯಾವುದೇ ರೀತಿಯ ಅಪರಾಧ ಮಾಡಿಲ್ಲದಿದ್ದರೂ ಸಹಿತ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿದ್ದು, ಆರೋಪಿ ನ್ಯಾಯಾಲಯಕ್ಕೆ ಸೂಕ್ತ ಜಾಮೀನು ನೀಡಲು ತಯಾರಿದ್ದು ಹಾಗೂ ನ್ಯಾಯಾಲಯ ವಿಧಿಸುವ ಷರತ್ತುಗಳನ್ನು ಪಾಲಿಸಲು ತಯಾರಿರುತ್ತಾರೆಂದು, ಆದ್ದರಿಂದ ಆರೋಪಿ ಸಲ್ಲಿಸಿರುವ ಜಾಮೀನು ಅರ್ಜಿಯನ್ನು ಮಂಜೂರು ಮಾಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

2. ಸದರಿ ಅರ್ಜಿಗೆ ಸರಕಾರಿ ಅಭಿಯೋಜಕರು ತಕರಾರು ಸಲ್ಲಿಸಿ, ಆರೋಪಿ ಮೇಲೆ ಇರತಕ್ಕಂತಹ ಆಪಾದನೆ ಜಾಮೀನು ರಹಿತವಾದಂತಹ ಆಪಾದನೆಯಾಗಿರುತ್ತದೆ. ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದಲ್ಲಿ ಪುನಃ ಇಂತಹದೇ ಕೃತ್ಯ ಎಸಗುವ ಸಾಧ್ಯತೆ ಇರುತ್ತದೆ ಹಾಗೂ ತನಿಖೆಗೆ ಸಹಕರಿಸದೇ ಸಾಕ್ಷ್ಯಾಧಾರಗಳನ್ನು ನಾಶಪಡಿಸುವ, ಸಾಕ್ಷಿದಾರರಿಗೆ ಬೆದರಿಸುವ ತನಿಖೆಗೆ ಅಡ್ಡಿವುಂಟು ಮಾಡುವ ಸಾಧ್ಯತೆ ಇರುತ್ತದೆ ಎಂದು, ಈ ಮೇಲ್ಕಂಡ ಕಾರಣಗಳಿಂದಾಗಿ ಜಾಮೀನು ಅರ್ಜಿಯನ್ನು ತಿರಸ್ಕರಿಸಬೇಕೆಂದು ಕೇಳಿಕೊಂಡಿದ್ದಾರೆ.

3. ಅರ್ಜಿ, ತಕರಾರು ಹಾಗೂ ಉಭಯ ವಕೀಲರ ವಾದ ವಿವಾದವನ್ನು ಪರಿಶೀಲಿಸಲಾಗಿ, ಮಾನ್ಯ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಚರ್ಚೆಗೆ ಬಂದಿರುತ್ತವೆ:-

1. 1 ನೇ ಆರೋಪಿ ಪರ ವಕೀಲರು ಭಾರತೀಯ ದಂಡ ಸಂಹಿತೆ ಕಲಂ 439 ರಡಿ ಸಲ್ಲಿಸಿದ ಜಾಮೀನು ಅರ್ಜಿಯನ್ನು ಪುರಸ್ಕರಿಸಬಹುದೇ ?

2. ಯಾವ ಆದೇಶ ?

4. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

ಅಂಶ ನಂ.1 : ಸಕಾರಾತ್ಮಕವಾಗಿ

ಅಂಶ ನಂ.2 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ:

## ಕಾರಣಗಳು

5. ಅಂಶ ಸಂಖ್ಯೆ **1:** ಫಿರ್ಯಾದಿದಾರರು ಕೊಟ್ಟ ದೂರಿನಂತೆ ಚನ್ನಪಟ್ಟಣ ಗ್ರಾಮಾಂತರ ಪೊಲೀಸ್ ಠಾಣಾಧಿಕಾರಿಗಳು 1 ನೇ ಆರೋಪಿ ಮತ್ತು ಇತರೇ ಆರೋಪಿತರ ವಿರುದ್ಧ ಚನ್ನಪಟ್ಟಣ ಗ್ರಾಮಾಂತರ ಪೊಲೀಸ್ ಠಾಣಾ ಅಪರಾಧ ಸಂಖ್ಯೆ 320/2023 (ಎಸ್.ಸಿ.ನಂ.34/2024) ಭಾರತೀಯ ದಂಡ ಸಂಹಿತೆ ಕಲಂ.120 ಬಿ, 302, 201, 404 ಸಹಕಲಂ.34 ರ ಅಡಿಯಲ್ಲಿ ಕೇಸು ದಾಖಲು ಮಾಡಿರುತ್ತಾರೆ.

6. ಪ್ರಕರಣದ ಸಂಕ್ಷಿಪ್ತ ಸಾರಾಂಶ**:** ಮೃತ ಮಹಾದೇವಯ್ಯನವರ ಜಮೀನಿನ ತೋಟದ ಮನೆಯ ಜಮೀನಿಗೆ ಹೊಂದಿಕೊಂಡಂತೆ ಇರುವ ಸಿ.ಪಿ.ಗಂಗಾಧರೇಶ್ವರ ಜಮೀನಿನ ತೋಟದ ಮನೆಯಲ್ಲಿ ಆರೋಪಿ 1 ಮತ್ತು 4 ರವರು ಕೂಲಿ ಮಾಡಿಕೊಂಡು ವಾಸವಾಗಿದ್ದು, ಸುಮಾರು 2 ವರ್ಷಗಳ ಹಿಂದೆ 1 ನೇ ಆರೋಪಿ ಕೃಷಿ ಮಾಡಿಕೊಂಡಿದ್ದ ಜಮೀನಿನ ಪಕ್ಕದ ಜಮೀನಿನ ವೀರಭದ್ರೇಗೌಡರೊಂದಿಗೆ ಜಗಳ ಮಾಡಿಕೊಂಡಿದ್ದು, ಈ ಸಮಯದಲ್ಲಿ ಮೃತ ವ್ಯಕ್ತಿ 1 ನೇ ಆರೋಪಿಗೆ ಜಗಳ ಮಾಡದಂತೆ ಬೈಯ್ದು ಎಚ್ಚರಿಕೆ ನೀಡಿದ್ದು, ಆ ದಿನದಿಂದ 1 ನೇ ಆರೋಪಿ ಮೃತನ ಮೇಲೆ ದ್ವೇಷ ಹೊಂದಿದ್ದು, ಮೃತ ಮಹಾದೇವಯ್ಯರವರು 1 ನೇ ಆರೋಪಿಯ ಪತ್ನಿ 4 ನೇ ಆರೋಪಿಗೆ ತನ್ನದೊಂದಿಗೆ ಅನೈತಿಕ ಸಂಬಂಧ ಬೆಳೆಸುವಂತೆ ಒತ್ತಾಯಿಸಿದ್ದು ಹಾಗೂ 1 ನೇ ಆರೋಪಿಗೂ ಸಹಿತ ನಿನ್ನ ಹೆಂಡತಿಯನ್ನು ತನ್ನ ಜೊತೆ ಕಳುಹಿಸುವಂತೆ ಒತ್ತಾಯಿಸಿದ್ದರಿಂದ, ಇದರಿಂದ ಕೋಪಗೊಂಡು ಮೃತ ವ್ಯಕ್ತಿ ವಡ್ಡರದೊಡ್ಡಿಯ ತೋಟದ ಮನೆಯಲ್ಲಿ ಒಬ್ಬನೇ ಮಲಗಿರುವುದನ್ನು ನೋಡಿ ಆತನನ್ನು ಕೊಲೆ ಮಾಡಬೇಕೆಂಬ ಉದ್ದೇಶದಿಂದ 2 ನೇ ಆರೋಪಿ 1 ನೇ ಆರೋಪಿಯ ತಮ್ಮನಾಗಿದ್ದು, ಆರೋಪಿತರೆಲ್ಲರೂ ಸಂಚು ರೂಪಿಸಿ ಮೃತ ಮಹಾದೇವಯ್ಯ ಈತನನ್ನು ಕೊಲೆ ಮಾಡಿ ತಮಿಳುನಾಡಿಗೆ

ಹೋಗಿದ್ದು, ನಂತರ ಪೊಲೀಸರು ತನಿಖೆ ಮಾಡಿದ್ದರಿಂದ ಆರೋಪಿಯನ್ನು ದಸ್ತಗಿರಿ ಮಾಡಿ ವಿಚಾರಿಸಿದಾಗ ಕೊಲೆ ಮಾಡಿದ್ದರ ಬಗ್ಗೆ ಒಪ್ಪಿಕೊಂಡು ಸ್ವಇಚ್ಛಾ ಹೇಳಿಕೆಯನ್ನು ನೀಡಿದ್ದರಿಂದ ತನಿಖೆ ಪೂರ್ಣಗೊಳಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

7. ದೋಷಾರೋಪಣಾ ಪಟ್ಟಿಯನ್ನು ಪರಿಶೀಲಿಸಲಾಗಿ ದಿನಾಂಕ 03.12.2023 ರಂದು ಮೃತನ ಮಗ ಪ್ರಶಾಂತ್ ಈತನು ನನ್ನ ತಂದೆಯನ್ನು ಯಾರೋ ಕಾರು ಸಮೇತ ಅಪಹರಿಸಿಕೊಂಡು ಹೋಗಿದ್ದು, ಹುಡುಕಿ ಕೊಡಬೇಕೆಂದು ದೂರು ಕೊಟ್ಟಿದ್ದು, ಆಗ ಪೊಲೀಸರು ಕ್ರೈಂ ನಂ.320/2023 ಭಾ.ದಂ.ಸಂ.ಕಲಂ.365 ರಡಿಯಲ್ಲಿ ಕೇಸು ದಾಖಲು ಮಾಡಿರುತ್ತಾರೆ. ನಂತರ ಪುನಃ ಮೃತನ ಮಗ ದಿನಾಂಕ 04.12.2023 ರಂದು ನನ್ನ ತಂದೆ ಕಾಣಿಸುತ್ತಿಲ್ಲ, ಕತ್ತಿನಲ್ಲಿದ್ದ ಚಿನ್ನ ಸಹಿತ ಕಾಣಿಸುತ್ತಿಲ್ಲ, ಯಾರೋ ಕೊಲೆ ಮಾಡಿ ಹೋಗಿರುತ್ತಾರೆ ಪತ್ತೆ ಹಚ್ಚಬೇಕೆಂದು ದೂರು ಕೊಟ್ಟಿದ್ದು, ಆ ಪ್ರಕಾರ ಸದರಿ ಪ್ರಕರಣದಲ್ಲಿ ಭಾ.ದಂ.ಸಂ.ಕಲಂ.302, 211, 397 ರಡಿಯಲ್ಲಿ ಕೇಸು ದಾಖಲು ಮಾಡಿರುತ್ತಾರೆ. ಈ 2 ದೂರಿನಲ್ಲಿ ಆರೋಪಿ ಪ್ರಕರಣದಲ್ಲಿ ಭಾಗಿಯಾಗಿರುತ್ತಾರೆ ಎಂದು ಎಲ್ಲೂ ಸಹಿತ ಕಂಡು ಬಂದಿರುವುದಿಲ್ಲ. ಸದರಿ ವ್ಯಕ್ತಿಗಳನ್ನು ಪೊಲೀಸರು ವಿಚಾರ ಮಾಡಿದಾಗ ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಯಾರೋ ಕೊಲೆ ಮಾಡಿರುತ್ತಾರೆ ಎಂದು ಹೇಳಿರುತ್ತಾರೆ. ಆದ್ದರಿಂದ ಸದರಿ ಪ್ರಕರಣವನ್ನು ರುಜುವಾತುಪಡಿಸಬೇಕಾದಲ್ಲಿ ಸಾಂದರ್ಭಿಕ ಸಾಕ್ಷಿಗಳ ಮೂಲಕ ರುಜುವಾತುಪಡಿಸಬೇಕಾಗುತ್ತದೆ.

8. 4 ನೇ ಆರೋಪಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಕ್ರಿಮಿನಲ್ ಪಿಟಿಷನ್ ನಂ.1739/2025 ರಲ್ಲಿ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ಜಾಮೀನು ಮಂಜೂರು ಮಾಡುವಾಗ ಆರೋಪಿತರು ಸದರಿ ಪ್ರಕರಣದಲ್ಲಿ ಭಾಗಿಯಾಗಿರುತ್ತಾರೆ ಎಂದು ಸಾಂದರ್ಭಿಕ ಸಾಕ್ಷಿಗಳ ಮೂಲಕ ರುಜುವಾತುಪಡಿಸಬೇಕಾಗುತ್ತದೆ. ಮೊದಲು ಪ್ರಥಮ ವರ್ತಮಾನ ವರದಿಯಲ್ಲಿ ಭಾ.ದಂ.ಸಂ. ಕಲಂ.365 ರಡಿಯಲ್ಲಿ ಕೇಸು ದಾಖಲು ಮಾಡಿರುತ್ತಾರೆ. ಈ ಕಾರಣದಿಂದ ಆರೋಪಿಗೆ ಜಾಮೀನು ಮಂಜೂರು ಮಾಡಿರುತ್ತಾರೆ.

9. ಅದೇ ಪ್ರಕಾರ 3 ನೇ ಆರೋಪಿ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯುದಲ್ಲಿ ಕ್ರಿಮಿನಲ್ ಪಿಟಿಷನ್ ನಂ.14408/2025 ರಲ್ಲಿ ಜಾಮೀನು ಕೋರಿ ಅರ್ಜಿ ಸಲ್ಲಿಸಿದಾಗ ಮಾನ್ಯ ಉಚ್ಛ ನ್ಯಾಯಾಲಯವು ಸದರಿ ಪ್ರಕರಣ ಸಂಪೂರ್ಣ ಸಾಂದರ್ಭಿಕ ಸಾಕ್ಷಿಗಳ ಮೂಲಕ ರುಜುವಾತುಪಡಿಸಬೇಕಾಗುತ್ತದೆ, ಆರೋಪಿ ಕಡೆಯಿಂದ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದು ಪರಿಗಣಿಸಿ ಜಾಮೀನು ಮಂಜೂರು ಮಾಡಲಾಗಿರುತ್ತದೆ.

10. ಜಿಲ್ಲಾ ಬಂಧಿಖಾನೆ ಅಧೀಕ್ಷಕರು 1 ನೇ ಆರೋಪಿಯ ಆರೋಗ್ಯ ಸರಿಯಿಲ್ಲ, ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಹೆಚ್ಚಿನ ಚಿಕಿತ್ಸೆ ಕೊಡಿಸಬೇಕೆಂದು ದಿನಾಂಕ 11.08.2025 ರಂದು ಅರ್ಜಿ ಸಲ್ಲಿಸಿದ್ದು, ಈ ಅರ್ಜಿಯ ಪ್ರಕಾರ 1 ನೇ ಆರೋಪಿಯ ಆರೋಗ್ಯ ಸರಿ ಇರುವುದಿಲ್ಲ ಹಾಗೂ ದಿನಾಂಕ 21.12.2023 ರಿಂದ ನ್ಯಾಯಾಂಗ ಬಂಧನದಲ್ಲಿದ್ದು, ಎದುರುದಾರ ಪೊಲೀಸರು ತನಿಖೆ ಪೂರ್ಣಗೊಳಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವುದರಿಂದ ಆರೋಪಿಯು ಮುಂದಿನ ತನಿಖೆಗೆ ಅವಶ್ಯಕತೆ ಇರುವುದಿಲ್ಲ ಹಾಗೂ ಆರೋಪಿ 3 ಮತ್ತು 4 ರವರು ಜಾಮೀನು ಪಡೆದುಕೊಂಡಿರುವುದರಿಂದ ಸಮಾನತೆಯ ಆಧಾರದ ಮೇಲೆ ಜಾಮೀನು ಪಡೆಯಲು ಸದರಿ ಆರೋಪಿ ಅರ್ಹರಿರುತ್ತಾರೆ ಎಂದು ಮಾನ್ಯ ಉಚ್ಛ ನ್ಯಾಯಾಲಯವು ಕ್ರಿಮಿನಲ್ ಪಿಟಿಷನ್ ನಂ.698/2014 ತೀರ್ಪಿನಲ್ಲಿ ತಿಳಿಸಲಾಗಿರುತ್ತದೆ. ಸದರಿ ತೀರ್ಪಿನ ಮೂಲಕ 1 ನೇ ಆರೋಪಿ ಷರತ್ತಿನ ಆಧಾರದ ಮೇಲೆ ಜಾಮೀನು ಪಡೆಯಲು ಅರ್ಹರಿರುತ್ತಾರೆ.

11. ಎದುರುದಾರ ಪೊಲೀಸರು ತನಿಖೆ ಪೂರ್ಣಗೊಳಿಸಿ ದೋಷಾರೋಪಣಾ ಪಟ್ಟಿ ಸಲ್ಲಿಸಿರುವುದರಿಂದ 1 ನೇ ಆರೋಪಿ ಮೇಲೆ ಇರುವ ಆಪಾದನೆ ಜಾಮೀನು ರಹಿತವಾದ ಆಪಾದನೆಯಾಗಿದ್ದರೂ ಸಹಿತ ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸರ್ವೋಚ್ಛ ನ್ಯಾಯಾಲಯದ ***2018 SAR Crl. 584 Seema Singh V/s. CBI and Another*** ತೀರ್ಪಿನ ಪ್ಯಾರಾ 13 ನ್ನು ಪರಿಶೀಲಿಸಲಾಗಿ ಆರೋಪಿಯ ಮೇಲೆ ಇರತಕ್ಕಂತಹ ಅಪರಾಧ ಘೋರ ಸ್ವರೂಪದ ಅಪರಾಧವಾಗಿದ್ದರೂ ಸಹಿತ ಆ ಒಂದು ಕಾರಣದಿಂದ ತಿರಸ್ಕರಿಸಲು ಬರಲಾರದು. ಜಾಮೀನು ನೀಡುವುದು ನಿಯಮ, ತಿರಸ್ಕರಿಸುವುದು ಅದಕ್ಕೆ

ಅಪವಾದವಾಗುತ್ತದೆ ಅಂತ ತೀರ್ಪಿನಲ್ಲಿ ತಿಳಿಸಲಾಗಿರುತ್ತದೆ. ಅದೇ ಪ್ರಕಾರ ***Crl. Appeal No.3173/2024 Jalaluddeen Khjan V/s. Union of India*** ತೀರ್ಪಿನ ಪ್ಯಾರಾ21 ನ್ನು ಪರಿಶೀಲಿಸಲಾಗಿ ನ್ಯಾಯಾಲಯವು ಜಾಮೀನು ಮಂಜೂರು ಮಾಡುವುದರ ಬಗ್ಗೆ ಹಿಂಜರಿಯಬಾರದು. ಕಾನೂನು ಪ್ರಕಾರ ಹಾಗೂ ಪ್ರಕರಣದ ವಸ್ತು ವಿಷಯವನ್ನು ಪರಿಗಣಿಸಿ ಜಾಮೀನು ಮಂಜೂರು ಮಾಡಬೇಕಾಗುತ್ತದೆ ಎಂಬುದರ ಬಗ್ಗೆ ತೀರ್ಪಿನಲ್ಲಿ ತಿಳಿಸಲಾಗಿರುತ್ತದೆ. ಸದರಿ ತೀರ್ಪುಗಳ ಪ್ರಕಾರ ಆರೋಪಿ ದಿನಾಂಕ 11-04-2025 ರಿಂದ ನ್ಯಾಯಾಂಗ ಬಂಧನದಲ್ಲಿದ್ದು, ತನಿಖೆ ಪೂರ್ಣಗೊಂಡಿದ್ದು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದು ನಂತರ ಮಾನ್ಯ ಜಿಲ್ಲಾ ನಾಯಾಲಯಕ್ಕೆ ಪ್ರಕರಣವನ್ನು ಕಮಿಟ್ ಮಾಡಿದ್ದು ಎಸ್.ಸಿ.ನಂ.109/2025 ಅಂತ ಕೇಸು ದಾಖಲಾಗಿರುತ್ತದೆ. ಈ ಕಾರಣದಿಂದ 1 ನೇ ಆರೋಪಿ ಜಾಮೀನು ಪಡೆಯಲು ಅರ್ಹರಿರುತ್ತಾರೆ.

12. <u>ಅಂಶ ಸಂಖ್ಯೆ **2**</u>**:** ಅಂಶ ಸಂಖ್ಯೆ 1 ಕ್ಕೆ ನೀಡಿದ ಕಾರಣ ಹಾಗೂ ಉತ್ತರಗಳಿಗಾಗಿ ಈ ಕೆಳಕಂಡಂತೆ ಆದೇಶಃ

## <u>ಆದೇಶ</u>

1 ನೇ ಆರೋಪಿ ಪರ ವಕೀಲರು ಭಾರತೀಯ ದಂಡ ಸಂಹಿತೆ ಕಲಂ 439 ರ ಅಡಿಯಲ್ಲಿ ಸಲ್ಲಿಸಿದ ಜಾಮೀನು ಅರ್ಜಿಯನ್ನು ಪುರಸ್ಕರಿಸಲಾಯಿತು.

1 ನೇ ಆರೋಪಿ ಸಂಬಂಧಪಟ್ಟ ನ್ಯಾಯಾಲಯಕ್ಕೆ/ ದಂಡಾಧಿಕಾರಿಗಳ ನ್ಯಾಯಾಲಯಕ್ಕೆ ರೂ.1,00,000/- (ಒಂದು ಲಕ್ಷ ರೂಪಾಯಿ) ಸ್ವ ಮುಚ್ಚಳಿಕೆ ಪತ್ರ ಹಾಗೂ ಅಷ್ಟೇ ಮೊತ್ತದ ಒಬ್ಬ ಸೂಕ್ತ ಜಾಮೀನನ್ನು ನೀಡತಕ್ಕದ್ದು ಹಾಗೂ ಅರ್ಜಿದಾರ ಈ ಕೆಳಕಂಡ ಷರತ್ತುಗಳನ್ನು ಪಾಲಿಸತಕ್ಕದ್ದು.

## <u>ಷರತ್ತುಗಳು</u>

1. 1 ನೇ ಆರೋಪಿ ತಮ್ಮ ವಿಳಾಸಕ್ಕೆ ಸಂಬಂಧಪಟ್ಟಂತೆ ಚುನಾವಣಾ ಗುರುತಿನ ಚೀಟಿ/ಆಧಾರ್ ಕಾರ್ಡ್ ಹಾಗೂ ಇತರೆ ದಾಖಲೆಯನ್ನು ಹಾಜರುಪಡಿಸತಕ್ಕದ್ದು.

2. 1 ನೇ ಆರೋಪಿ ಅಭಿಯೋಜಕ ಪಕ್ಷದ ಸಾಕ್ಷಿಗಳನ್ನು ಯಾವುದೇ ರೀತಿಯಿಂದಲೂ ಹೆದರಿಸತಕ್ಕದ್ದಲ್ಲ.

3. 1 ನೇ ಆರೋಪಿ ಪುನಃ ಇಂತಹ ಪ್ರಕರಣಗಳಲ್ಲಿ ಭಾಗಿಯಾಗತಕ್ಕದ್ದಲ್ಲ.

4. ಈ ಮೇಲ್ಕಂಡ ಷರತ್ತುಗಳನ್ನು ಪೂರೈಸಿದ ನಂತರ 1 ನೇ ಆರೋಪಿ ಬಿಡುಗಡೆ ಮಾಡಲು ಸಂಬಂಧಪಟ್ಟಂತಹ ಬಂಧೀಖಾನೆ ಅಧೀಕ್ಷಕರಿಗೆ ಮಾಹಿತಿ ಕಳಿಸಲು ಆದೇಶಿಸಲಾಯಿತು.

ಈ ಮೇಲ್ಕಂಡ ಷರತ್ತುಗಳನ್ನು ಉಲ್ಲಂಘನೆ ಮಾಡಿದಲ್ಲಿ ತಕ್ಷಣವೇ 1 ನೇ ಆರೋಪಿಯ ಜಾಮೀನು ವಜಾ ಆಗತಕ್ಕದ್ದು ಅಂತ ಆದೇಶ ಮಾಡಲಾಯಿತು.

*(ಈ ಆದೇಶದ ಉಕ್ತಲೇಖನವನ್ನು ಶೀಘ್ರಲಿಪಿಗಾರ್ತಿ ಗ್ರೇಡ್ -3 ರವರಿಗೆ ನೇರವಾಗಿ ಗಣಕಯಂತ್ರ ಪರದೆಯ ಮೇಲೆ ನೀಡಿದ್ದು, ನಂತರ ಅವರು ಗಣಕೀಕರಿಸಿದ್ದನ್ನು ಓದಿ, ತಿದ್ದಿ ಇದೇ ದಿನಾಂಕ **1** ನೇ ಡಿಸೆಂಬರ್ ಮಾಹೆ **2025** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).*

(ಎಂ.ಹೆಚ್. ಅಣ್ಣಯ್ಯನವರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ.

**** ****
NGR